5) *If so, what are its conclusions?*

SHRI E.T. SHAMBUNATH (Minister of State for Forest):

1) Yes.

2) 11 Elephants have died in Kollegal Forest Division due to suspected Tripanasoniasis disease.

3) Due to an epidemic.

4) Yes, by the Insititute of Animal Health and Veterinary Biologicals, Bangalore.

5) The deaths are strongly suspected to be due to Tripanasoniasis disease.

ನಾಗರಹೊಳೆಯಲ್ಲಿನ ಪ್ರವಾಸಿ ಕುಟೀರಗಳನ್ನು ಹಾರಾಜು ಮಾಡುವ ಪ್ರಸ್ತಾವನೆ

3577 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗರಹೊಳೆಯಲ್ಲಿ ಅರಣ್ಯ ಇಲಾಖೆ ನಿರ್ಮಿಸಿರುವ ಪ್ರವಾಸಿ ಕುಟೀರಗಳನ್ನು ಹರಾಜು ಮಾಡಲು ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ತಾಜ್ ಗ್ರೂಪ್‌ನವರು ಮುಂದೆ ಬಂದು ತಮ್ಮ ಪ್ರಸ್ತಾವನೆಯನ್ನು ನೀಡಿದ್ದಾರೆಯೇ?

ಇ) ಹಾಗಿದ್ದಲ್ಲಿ ತಾಜ್ ಗುಂಪಿನವರು ಎಷ್ಟು ಹಣವನ್ನು ಕೊಡುವುದಕ್ಕೆ ಇಚ್ಛಿಸಿದ್ದಾರೆ?

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ನಾಗರಹೊಳೆಯಲ್ಲಿ ಅರಣ್ಯ ಇಲಾಖೆಯು ನಿರ್ಮಿಸಿರುವ ಪ್ರವಾಸಿ ಕುಟೀರಗಳನ್ನು ಹರಾಜು ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿಲ್ಲ. ಆದರೆ ಮೂರ್‌ಕಲ್ಲಿನಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು ನಿರ್ಮಿಸಿರುವ ವನ್ಯಜೀವಿ ಪ್ರವಾಸಿ ಸಂಕೀರ್ಣವನ್ನು ಗುತ್ತಿಗೆ ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ಆ) ಮೆ. ಗೇಟ್‌ವೇ ಹೋಟೆಲ್ ಮತ್ತು ಗೇಟ್‌ವೇ ರೆಸಾರ್ಟ್ಸ್ (ತಾಜ್‌ಸಮೂಹ) ಇವರು ಇದನ್ನು ಗುತ್ತಿಗೆ ಮೇಲೆ ನಡೆಸಲು ಇತರರೊಂದಿಗೆ ಪ್ರಸ್ತಾವನೆ ನೀಡಿದ್ದಾರೆ.

ಇ) ಇವರು 15 ವರ್ಷಗಳ ಗುತ್ತಿಗೆ ಅವಧಿಗೆ ರೂ. 313.75 ಲಕ್ಷಗಳನ್ನು ಕೊಡಲು ಇಚ್ಛಿಸಿದ್ದಾರೆ.

ಕುಣಿಗಲ್‌ನಲ್ಲಿ ತೋಟಗಾರಿಕೆ ತರಬೇತಿ ಕೇಂದ್ರ ತೆರೆಯುವ ಪ್ರಸ್ತಾವನೆ

3576 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?.

ಅ) ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಒಂದು ತೋಟಗಾರಿಕೆ ತರಬೇತಿ ಕೇಂದ್ರವನ್ನು ತೆರೆಯುವ ಪ್ರಸ್ತಾವನೆ ಇದೆಯೇ?

ಆ) ಇಲ್ಲದಿದ್ದರೆ ಸರ್ಕಾವು ಕುಣಿಗಲ್ ತಾಲ್ಲೂಕಿನಲ್ಲಿ ಇರುವ ಮೂಲ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಒಂದು ತೋಟಗಾರಿಕೆ ತರಬೇತಿ ಕೇಂದ್ರ ಮತ್ತು ಸಂಶೋಧನಾ ಕೇಂದ್ರವನ್ನು ತೆರೆಯಲು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):